ಅರ್ಬನ್ ರಿನಿವಲ್ ಮಿಷನ್ (ಜೆ.ಎನ್.ಎನ್.ಯು.ಆರ್.ಎಮ್). ಹಣಕಾಸು ಸಹಯೋಗದೊಂದಿಗೆ ಕೈಗೊತ್ತಿಕೊಂಡಿದ್ದು ಈಗಾಗಲೇ 18.32 ಕಿ.ಮೀ ಉದ್ದದ ಕೊಳವೆ ಮಾರ್ಗ ಅಳವಡಿಸಲು ಟೆಂಡರ್ ಕರೆಯಲಾಗಿದೆ.

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಉತ್ಪಾದನೆಗೊಂಡ ಪೌರ ಘನ ತ್ಯಾಜ್ಯ ವಸ್ತುಗಳನ್ನು ಸಂಗ್ರಹಿಸಿ ವೈಜ್ಞಾನಿಕವಾಗಿ ಪೌರ ಘನ ತ್ಯಾಜ್ಯ (ವ್ಯವಸ್ಥಾಪನೆ ಮತ್ತು ನಿರ್ವಹಣೆ) ನಿಯಮಗಳ ರೀತ್ಯಾ ವಿಲೇವಾರಿ ಮಾಡುತ್ತದೆ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : (130)252
ಸದಸ್ಯರ ಹೆಸರು : ಶ್ರೀ.ರೋಷನ್ ಬೇಗ್.ಆರ್
ಉತ್ತರಿಸುವ ಸಚಿವರು : (ಶ್ರೀ.ಆರ್.ಅಶೋಕ್)
: ಮಾನ್ಯ ಸಾರಿಗೆ ಸಚಿವರು

ಅ) ಬೆಂಗಳೂರು ನಗರದಲ್ಲಿರುವ ಆಟೋ ರಿಕ್ಷಾಗಳ ಸಂಖ್ಯೆ ಎಷ್ಟು?
75,247

ಆ) ಹಾಗಿದ್ದಲ್ಲಿ, ಬೆಂಗಳೂರು ನಗರದಲ್ಲಿ ಸುಮಾರು 5000 ಆಟೋರಿಕ್ಷಾಗಳಿಗೆ ಪರ್ಮಿಟ್ ನೀಡುವ ಯೋಜನೆ ಯೇನಾದರೂ ಸರ್ಕಾರದ ಮುಂದಿದೆಯೇ?

ರಾಜ್ಯ ಸರ್ಕಾರವು ದಿ: 25–3–2008 ರಂದು ಆದೇಶ ಹೊರಡಿಸಿ 5000 ಆಟೋರಿಕ್ಷಾ ರಹದಾರಿಗಳನ್ನು ಮಂಜೂರು ಮಾಡಿರುತ್ತದೆ.

ಈ ರಹದಾರಿಗಳ ಮಂಜೂರಾತಿಗೆ ಬೆಂಗಳೂರು ಪ್ರಾದೇಶಿಕ ಸಾರಿಗೆ ಪ್ರಾಧಿಕಾರವು ಅರ್ಜಿಗಳನ್ನು ಸ್ವೀಕರಿಸುತ್ತಿದ್ದು, ಮಂಜೂರಾತಿ ಪ್ರಕ್ರಿಯೆ ಚಾಲ್ತಿಯಲ್ಲಿರುತ್ತದೆ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : (179)253
ಮಾನ್ಯ ಸದಸ್ಯರ ಹೆಸರು : ಶ್ರೀ ಸಂಪಂಗಿ .ಎನ್ ಬಾಗೇಪಲ್ಲಿ)
ಉತ್ತರಿಸುವ ಸಚಿವರು : ಶ್ರೀ.ಸಿ.ಎಂ.ಉದಾಸಿ)
: ಲೋಕೋಪಯೋಗಿ ಸಚಿವರು

ಅ ಚಿಕ್ಕಬಳ್ಳಾಪುರ ಜಿಲ್ಲೆ ಬಾಗೇಪಲ್ಲಿ, ಗುಡಿಬಂಡೆ ತಾಲ್ಲೂಕಲುಗಳಲ್ಲಿ ಶಿಥಿಲಾವಸ್ಥೆಯಲ್ಲಿರುವ ಲೋಕೋಪಯೋಗಿ ಇಲಾಖೆಯ ರಸ್ತೆಗಳ ವಿಸ್ತೀರ್ಣವೆಷ್ಟು ಹಾಗೂ ಸೇತುವೆಗಳ ಸಂಖ್ಯೆ ಎಷ್ಟು, ಶಿಥಿಲಾವಸ್ಥೆಯಲ್ಲಿರುವ ಈ ರಸ್ತೆಗಳು ಹಾಗೂ ಸೇತುವೆಗಳಿಂದ ಜನತೆಗೆ ಹಾಗೂ ಸಂಚಾರಕ್ಕೆ ಅನಾನುಕೂಲವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ

ಚಿಕ್ಕಬಳ್ಳಾಪುರ ಜಿಲ್ಲೆಯ, ಬಾಗೇಪಲ್ಲಿ ಮತ್ತು ಗುಡಿಬಂಡೆ ತಾಲ್ಲೂಕುಗಳಲ್ಲಿ ಶಿಥಿಲಗೊಂಡಿರುವ ರಾಜ್ಯ ಹೆದ್ದಾರಿ ಮತ್ತು ಜಿಲ್ಲಾ ಮುಖ್ಯ ರಸ್ತೆಗಳ ವಿವರ ಕೆಳಗಿನಂತಿದೆ.

ಕ್ರ ಸಂ.	ತಾಲ್ಲೂಕು	ರಸ್ತೆಯ ಒಟ್ಟು ಉದ್ದ	ಶಿಥಿಲಾವಸ್ಥೆಯಲಿರುವ ಒಟ್ಟು ಉದ್ದ	ವಿಸ್ತೀರ್ಣ ಚ.ಮೀ
ಬಾಗೇಪಲ್ಲಿ				
1	ರಾಜ್ಯಹೆದ್ದಾರಿ	22.33	10.80	40500.00
	ಜಿ.ಮು.ರ	190.20	30.00	112500.00
ಗುಡಿಬಂಡೆ				
2	ರಾಜ್ಯಹೆದ್ದಾರಿ	18.57	9.00	33750.00
	ಜಿ.ಮು.ರ	38.60	3.00	11250.00
	ಒಟ್ಟು	**269.70**	**52.80**	**198000.00**

ಗಮನಕ್ಕೆ ಬಂದಿದೆ.

ಆ ಈ ರಸ್ತೆ ಹಾಗೂ ಶಿಥಿಲಗೊಂಡಿರುವ ಸೇತುವೆಗಳ ದುರಸ್ಥಿಗೆ ಸರ್ಕಾರವು ಕೈಗೊಳ್ಳುವ ಕ್ರಮವೇನು?

ಬಾಗೇಪಲ್ಲಿ ಮತ್ತು ಗುಡಿಬಂಡೆ ತಾಲ್ಲೂಕುಗಳಲ್ಲಿರುವ ರಾಜ್ಯ ಹೆದ್ದಾರಿಗಳ ನಿರ್ವಹಣೆಯನ್ನು 2005–08 ರವರೆಗಿನ 3 ವರ್ಷಗಳ ಪ್ಯಾಕೇಜ್ ಅಡಿಯಲ್ಲಿ ನಿರ್ವಹಿಸಿ ಗುಂಡಿಗಳನ್ನು ಮುಚ್ಚಿ ನಿರ್ವಹಣೆ ಮಾಡಲಾಗಿದ್ದು ನಿರ್ವಹಣಾ ಅವಧಿಯು ಮಾರ್ಚ್ 2009ರವರೆಗೆ ಇರುತ್ತದೆ. ಹಾಗೂ 2007–08ನೇ ಸಾಲಿಗೆ ಜಿಲ್ಲಾ ಮುಖ್ಯ ರಸ್ತೆಗಳಲ್ಲಿ ಗುಂಡಿಗಳನ್ನು ಮುಚ್ಚುವುದು ಹಾಗೂ ಇತರೆ ನಿರ್ವಹಣಾ ಕಾಮಗಾರಿಗಳನ್ನು ನಿರ್ವಹಿಸಿ ವಾಹನ ಸಂಚಾರಕ್ಕೆ ಅನುವು ಮಾಡಲಾಗಿದೆ.

2008–09ನೇ ಸಾಲಿಗೆ ಲೆಕ್ಕ ಶೀರ್ಷಿಕೆ 3054–ಯೋಜನೆ ಅಡಿಯಲ್ಲಿ ಬಾಗೇಪಲ್ಲಿ ಮತ್ತು ಗುಡಿಬಂದೆ ತಾಲ್ಲೂಕಲುಗಳಿಗೆ ಕ್ರಮವಾಗಿ ರೂ.155.10 ಲಕ್ಷ ಮತ್ತು ರೂ.30.45 ಲಕ್ಷಗಳ ಅನುದಾನ ಬಿಡುಗಡೆಯಾಗಿದ್ದು ಲಭ್ಯ ಅನುದಾನದಲ್ಲಿ 2008–09ನೇ ಸಾಲಿನ ಮುಂದುವರೆದ ಕಾಮಗಾರಿಗಳನ್ನು ಕೈಗೊಳ್ಳಲಾಗುವುದು.

2008–09ನೇ ಸಾಲಿಗೆ ಲೆಕ್ಕ ಶೀರ್ಷಿಕೆ 3054–12ನೇ ಹಣಕಾಸು ಯೋಜನೆ ಅಡಿಯಲ್ಲಿ ಜಿಲ್ಲಾ ಮುಖ್ಯ ರಸ್ತೆಗಳ ನಿರ್ವಹಣೆಗೆ ಬಾಗೇಪಲಿ ಮತ್ತು ಗುಡಿಬಂದೆ ತಾಲ್ಲೂಕುಗಳಿಗೆ ಕ್ರಮವಾಗಿ ರೂ.60.20 ಲಕ್ಷ ಮತ್ತು ರೂ.11.80 ಲಕ್ಷಗಳ ಅನುದಾನ ಒದಗಿಸಲಾಗಿದ್ದು, ಸದರಿ ಅನುದಾನದಲ್ಲಿ ವಾರ್ಷಿಕ ನಿರ್ವಹಣೆ ಕೈಗೊಳ್ಳಲು ಯೋಜನೆ ರೂಪಿಸಿ ಅನುಷ್ಠಾನಗೊಳಿಸಲಾಗುವುದು.

ಇ ಈ ಸೇತುವೆ ಹಾಗೂ ರಸ್ತೆಗಳನ್ನು ದುರಸ್ಥಿಗೊಳಿಸಿ ಜನತೆಯ ಉತ್ತಮ ಸಂಚಾರಕ್ಕೆ ಎಂದಿನಿಂದ ಅನುಕೂಲ ಮಾಡಿಕೊಡಲಾಗುವುದು?

ದುರಸ್ಥಿ ಅವಶ್ಯವಿರುವ ಮೇಲಿನ ರಸ್ತೆಗಳಲ್ಲಿ ಲಭ್ಯ ಅನುದಾನದಲ್ಲಿ ದುರಸ್ಥಿ ಕೈಗೊಂಡು ವಾಹನ ಸಂಚಾರಕ್ಕೆ ಯೋಗ್ಯವನ್ನಾಗಿ ಮಾಡಲಾಗುವುದು.